ಶ್ರೀವಿ.ಎನ್.ಪಾಟೀಲ್—ಫಾಡರ್ ಅನ್ನು ಗುಲ್ಬರ್ಗ ಬೀದರ್ ಜಿಲ್ಲೆಗೆ ಫ್ರೀ ಟ್ರಾನ್ಸ್‌ಪೋರ್ಟೇಷನ್ ನಲ್ಲಿ ಕೊಡುತ್ತೀರಾ?

ಶ್ರೀ ಎನ್.ಹುಚ್ಚಮಾಸ್ತಿಗೌಡ.—ಟ್ರಾನ್ಸ್‌ಪೋರ್ಟೇಷನ್ ಅನ್ನು ಸರ್ಕಾರ ಮಹಿಸಿಕೊಳ್ಳುತ್ತದೆ. ಮಾನ್ಯ ಸದಸ್ಯರು ಕೇಳುತ್ತಾ ಇರುವ ಪ್ರಶ್ನೆ, ಅದನ್ನು ತೀರಾ ಉಚಿತವಾಗಿ ಒದಗಿಸಬೇಕು ಎಂದು ಇರಬಹುದು ಅದನ್ನೂ ಕೂಡ ಪರಿಶೀಲನೆ ಮಾಡುತ್ತೇವೆಂದು ಹೇಳಿದೆ.

ಶ್ರೀ ಕೆ.ಪ್ರಭಾಕರ್.—ಶ್ರೀಮಾನ್ ಆರ್ಮುಗಂ ಅವರ ವರದಿಯ ೮೯ ನೇ ಪುಟದಲ್ಲಿ ಕೊಟ್ಟಿರತಕ್ಕ ಚಿತ್ರವನ್ನು ನೋಡಿದರೆ, ಆತಿಯಾಗಿ ವೀಕರ್ ಸೆಕ್ಷನ್ಸ್ ಷೆಡ್ಯೂಲ್ ಕ್ಯಾಸ್ಟ್, ಷಡ್ಯೂಲ್ ಟ್ರೈಬ್ಸ್ ಬಡವರ ಏನು ಇದ್ದಾರೆ ಅವರನ್ನು ಸಂಪೂರ್ಣವಾಗಿ ಅವಿವಿ ಇಟ್ಟಿದ್ದಾರೆ ಎನ್ನುವುದನ್ನು ನೈಜವಾಗಿ ತಿಳಿಸಿದಾರೆ. ಕುಡಿಯುವ ನೀರಿನ ಕಷ್ಟ, ಸೆಂಡಿಮೆಂಟ ಗ್ರೌಂಡ್ಸ್ ನೀರು ಸಿಕ್ಕುವುದು ಕಷ್ಟ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಸಂಬಂಧಪಟ್ಟ ಸೋಷಿಯಲ್ ವೆಲ್‌ಫೇರ್ ಮತ್ತು ಡೆವಲಪ್‌ಮೆಂಟ್ ಇಲಾಖೆಯವರು ನಿರುತ್ಸಾಹಿಗಳಾಗಿದ್ದಾರೆ ಎಂದು ತಿಳಿಸಿದ್ದಾರೆ. ಅದಕ್ಕಾಗಿ ನಾನು ಸಲಹೆ ಮಾಡುತ್ತೇನೆ ಡಿವಿಷನ್‌ಲ್ ಕಮಿಷನರ್ ಅವರನ್ನು ಚೇರ್ಮನ್ ಆಗಿಟ್ಟು, ಒಂದು ಕೋಆರ್ಡಿನೇಷನ್ ಕಮಿಟಿ ಮಾಡಿ, ಸಂಬಂಧಪಟ್ಟ ಡಿಸ್ಟ್ರಿಕ್ಟ್ ಆಫೀಸರ್ ಅನ್ನು ಇನ್ಸ್‌ಪೆಕ್ಟರ್ ಆಗಿಟ್ಟು ಸರ್ಕಾರದವರು ಕೂಡಲೇ ವ್ಯವಸ್ಥೆ ಮಾಡಬೇಕು ಎಂದು ಒಂದು ಸೂಚನೆಯನ್ನು ಮಾಡುತ್ತ ಇದ್ದೇನೆ. ಅದಕ್ಕೆ ಉತ್ತರವನ್ನು ಸಂಬಂಧಪಟ್ಟ ಇಲಾಖೆಯವರು ಹೇಳಿದರೆ ಸಂತೋಷ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕ್ಷಾಮಪ್ರದೇಶದಲ್ಲಿ ಇರತಕ್ಕವರು ಅಂದು ದುಡಿದು ಶರೀರ ಶ್ರಮದಿಂದ ಜೀವನ ಮಾಡತಕ್ಕವರು ಬಹಳ ಅಪರೂಪ. ತಮ್ಮ ಜಮಾನಿನಿಂದ ಜೀವನ ಮಾಡತಕ್ಕವರು ಬಹಳ ಕಡಿಮೆ. ಹೆಚ್ಚಿನ ಜನಕ್ಕೆ ಕೆಲಸ ಸಿಕ್ಕಿದೆ, ಇನ್ನು ಯಾರಿಗೆ ಸಿಕ್ಕಿಲ್ಲ ಅವರಿಗೆ ಒದಗಿಸಿಕೊಡಬೇಕು. ದುಡಿಯುವುದರ ಜೊತೆಗೆ ಅವರಿಗೆ ಕೆಲಸ ಒದಗಿಸುವ ವ್ಯವಸ್ಥೆಯಾಗಿದೆ ಕುಡಿಯುವ ನೀರಿನ ವ್ಯವಸ್ಥೆಗೆ, ಬೋರ್‌ವೆಲ್ಸ್‌ಗಳನ್ನು ತೆಗೆದರೆ ತನ್ನಷ್ಟಕ್ಕೆ ತಾನೇ ಈ ಸಮಸ್ಯೆ ಬಗೆಹರಿಯುತ್ತದೆ. ಅಷ್ಟೇ ಅಲ್ಲ ಹಳಿಜನರ ಮನೆಗಳು ೧೦ ಇರಲಿ, ೨೦ ಇರಲಿ ಎಲ್ಲಿ ತೊಂದರೆ ಆಗಿದೆಯೋ ಅಲ್ಲಿ ಬಾವಿ ಮಾಡಬೇಕು ಎಂದು ಡೆಪ್ಯೂಟಿ ಕಮಿಷನರ್‌ರವರಿಗೆ ಸ್ಪಷ್ಟವಾಗಿ ತಿಳಿಸಿ ಬಂದಿದ್ದೇನೆ.

ಶ್ರೀ ಕೆ ಎಚ್.ಹನುಮೇಗೌಡ.—ಕ್ಷಾಮ ಪ್ರದೇಶಗಳಲ್ಲಿ ಭಾವಿ ತೆಗೆದಿದ್ದಾರೆ ನೀರು ಬಂದಿದೆ, ಮೆಷಿನ್ಸ್ ಫಿಕ್ಸ್ ಮಾಡಿದ್ದಾರೆ, ವೈಸೂರು ಎಲೆಕ್ಟ್ರಿಸಿಟಿ ಬೋರ್ಡಿನವರು ಅದರ ಎಸ್ಟಿಮೇಟನ್ನು ತಡೆಹಿಡಿದಿದ್ದಾರೆ. ಬಾವಿ ರೆಡಿ ಆಯಿತು, ನೀರು ಇದೆ, ಪಂಪ್ ಸೆಟ್ ಹಾಕಿರುತ್ತಾರೆ ಅಂಥ ಬಾವಿಗಳಿಗೆ ಕ್ಷಾಮ ಪರಿಹಾರ ಸಲುವಾಗಿ ಎಲೆಕ್ಟ್ರಿಕಲ್ ಲೈನ್ ಅನ್ನು ಎಳೆದುಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಿರಾ?

ಶ್ರೀ ಎಚ್.ಎಂ ಚೆನ್ನಬಸಪ್ಪ —ಮಾನ್ಯ ಸದಸ್ಯರು ವಿಷಯಗಳನ್ನು ಅರಿಯದೆ ಮಾತನಾಡಿದರೆ ಏನು ಹೇಳಲಿ? ೧೬೫೦ರೂಪಾಯಿಗೆ ರಿಲ್ಯಾಕ್ಸ್ ಮಾಡಿ ಎಷ್ಟೊ ವರ್ಷ ಆಯಿತು It has been enhanced to about 2000 or 1800 subject to correction in those areas. Even in other Areas it was relaxed, and if necessary further relaxation, in view of the scarcity will be examined.

1-30 P. M.

ಶ್ರೀ ಎಂ. ಎಸ್. ಕೃಷ್ಣನ್—.ವಿದ್ಯಾರ್ಥಿಗಳು ಫೀಜು ಮಾಫಿ ಮಾಡಬೇಕೆಂದು ಕೇಳುತ್ತಿದ್ದಾರೆ. ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿ ಅವರಿಗೆ ರಿಲೀಫ್ ಕೊಡಲು ಪ್ರಯತ್ನಮಾಡುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ—.ಅದನ್ನು ಆಲೋಚನೆ ಮಾಡುತ್ತೇವೆ.

Businsess of the House

ಶ್ರೀ ಟಿ. ಡಿ. ರಾಜೇಗೌಡ —.ಈಗ ಎಂದೂವರೆ ಗಂಟೆಯಾಗಿದೆ, ಇನ್ನೂ ಅಜೆಂಡಾದಲ್ಲಿ ಕೆಲವು ಕಾರ್ಯಕ್ರಮಗಳು ಮುಖ್ಯವಾದವು ಇವೆ, ಮಧ್ಯಾಹ್ನ ೩ ಗಂಟೆಯಿಂದ ೫ ಗಂಟೆವರೆಗೆ ಕುಳಿತು ಅವುಗಳನ್ನು ತೆಗೆದುಕೊಳ್ಳೋಣ.

ಅಧ್ಯಕ್ಷರು—.ನಿನ್ನೆ ದಿವಸ ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಇಂದು ಸಭೆ ಮುಗಿಸಲು ಒಪ್ಪಿದ್ದೀರಿ. ಆದುದರಿಂದ ಈಗ ಮಂತ್ರಿಗಳು ಉತ್ತರ ಕೊಟ್ಟ ನಂತರ ಸಭೆ ಮುಗಿಸಬೇಕು. ಸಭೆ ಒಪ್ಪಿದರೆ ಮಧ್ಯಾಹ್ನ ಕೊಡಬಹುದು.

SRI H. M. CHANNABASAPPA.—I am only guided by the Speaker,

SRI C M ARUMUGHAM.—On behalf of this House, I submit that this House may please be adjourned and meet this afternoon. As you are aware, there are still uncovered subjects in the Agenda I have also sent some adjournment motions. If we meet in the afternoon, we can complete whichever work that is pending.

SRI H. M. CHANNABASAPPA.—Madam Speaker so far as the Government is concerned, we do not want to come in the way of business being transacted for another one or two hours. But I leave it to the Speaker and the House.

MADAM SPEAKER.—If the House agrees, I do not mind.

SRI C. M. ARUMUGHAM.—Kindly agree with the Deputy Leader of the House. Let us meet in the afternoon.

MADAM SPEAKER.—The House will now rise and meet again at 3 p. m.

The House rose at thirty, five Minutes past one of the clock and reassae embled at three of the clock,

(*Madam Speaker in the chair*)

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಮಾನ್ಯ ಅಧ್ಯಕ್ಷರ ಅನುಮತಿ ಬೇಡಿ ಒಂದು ವಿಚಾರವನ್ನು ಸಭೆಯ ಗಮನಕ್ಕೆ ತರಬೇಕಾಗಿದೆ. ಶಿಲ್ಪಾನೆಯ ಸದಸ್ಯರಾದ ಶ್ರೀಮಾನ್ ಬಸವರಾಜ ಕಟ್ಟೀಮನಿಯವರು ಇಡೀ ಕರ್ನಾಟಕದಲ್ಲೇ ಬಹಳ ದೊಡ್ಡ ಹೆಸರಾದಂಥ ಸಾಹಿತಿಗಳು ಅವರ ಬಗ್ಗೆ ಮಾನ್ಯ ವಿರೋಧ ಪಕ್ಷಗಳ ನಾಯಕರಾದ ಶ್ರೀ ದೇವೇಗೌಡರು ಬಹಳ ಲಘುವಾಗಿ ಮಾತನಾಡಿದ್ದಾರೆ ಅದೇ ವಿಚಾರದಲ್ಲಿ ಶ್ರೀ ಬರವರಾಜಕಟ್ಟೀಮನಿಯವರು ಈ ಸಭೆಯ ಅಧ್ಯಕ್ಷರಾದ ತಮಗೂ ಪತ್ರ ಬರೆದಿದ್ದಾರೆಂದು ನಾನು ಕೇಳಿದೆ. ಈ ಸಾಹಿತಿಗಳಿಗೆ ಇಡೀ ಕರ್ನಾಟಕದಲ್ಲೆಲ್ಲಾ ಬಹಳ ಅಭಿಮಾನ ತೋರಿಸತಕ್ಕ ಜನರು ಬಹಳವಾಗಿದ್ದಾರೆ. ಆದರೆ ಶ್ರೀ ದೇವೇಗೌಡರ ಮಾತುಗಳಿಂದ ಬಹಳ ನೊಂದಿದ್ದಾರೆ. ಅದಕ್ಕಾಗಿ ನಾನು ಮಾನ್ಯ ದೇವೇಗೌಡರಿಗೆ ಆ ಮಾತುಗಳನ್ನು ವಾಪಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ ಅವರು ಪೂರಾ ಬೇಜರಾಗಿ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಡುವುದಕ್ಕೂ ಕೂಡ ಸಿದ್ಧವಾಗಿದ್ದಾರೆಂದು ಹೇಳುತ್ತಿದ್ದಾರೆ. ಆದುದರಿಂದ ಅವರು ತಮ್ಮ ಮಾತನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು —ಅವರು ನನಗೆ ಒಂದು ಪತ್ರವನ್ನು ಬರೆದಿದ್ದಾರೆ. ಅದು ಇಷ್ಟಾಗುವುದಕ್ಕೆ ಕಾರಣ ಏನು ಎಂಬುದನ್ನು ನಾನೀಗ ಸಭೆಯ ಗಮನಕ್ಕೆ ತರುವುದಕ್ಕೆ ಇಲ್ಲಿ ನಡೆದಿರತಕ್ಕ ವರದಿಯನ್ನು ಸಭೆಗೆ ಓದಿ ಹೇಳುತ್ತೇನೆ.

ಶ್ರೀ ಎಚ್. ಡಿ ದೇವೇಗೌಡ. —''ಇವೊತ್ತಿನ ದಿನಸ ರಾಜ್ಯದಲ್ಲಿರತಕ್ಕಂಥಹ ಪರಿಸ್ಥಿತಿಯ ಬಗ್ಗೆ ಮೇಲ್ಮನೆಯಲ್ಲಿ ನಡೆದ ಚರ್ಚೆಯ ವಿಚಾರ ಪತ್ರಿಕೆಯಲ್ಲಿ ನಾನು ಓದಿದ್ದೇನೆ. ನಮ್ಮ ವಿರೋಧ ಪಕ್ಷದ ನಾಯಕರು ಅಲ್ಲಿ ಇದನ್ನು ಒಂದು 'ದೈವೀ ಶಾಪ' ಎಂದು ಹೇಳಿದರು. ಅದಕ್ಕೆ ಮಾನ್ಯ ಹುಚ್ಚಮಾಸ್ತಿ ಗೌಡರು ''ನೀವು ಹತ್ತು ವರ್ಷ ಆಡಳಿತವನ್ನು ನಾಡಿದುತಹ ಪಾಪದ ಫಲ ಇದು. ಇದನ್ನು ರಾಜ್ಯದ

ಜನತೆ ಊಟ ಮಾಡುತ್ತಿದೆ'' ಎಂದು ಹೇಳಿದರು. ಅದು ಪತ್ರಿಕೆಗಳಲ್ಲಿಯೂ ವರದಿಯಾಗಿದೆ. ನಾನು ಅದರ ಪ್ರೊಸೀಡಿಂಗ್ಸ್‌ನ್ನು ತರಿಸಿ ಓದಿಲ್ಲ. ಆಮೇಲೆ ನಾನಾದರೂ ತಿಳಿದುಕೊಂಡೆ ''ಎಂತಹ ಪಾಪದ ಫಲವಾಯಿತು. ಈ ವಿರೇಂದ್ರ ಪಾಟೀಲರ ಸರ್ಕಾರ ೧೦ವರ್ಷಗಳ ಕಾಲಗಳ ಕಾಲ ಆಡಳಿತ ಮಾಡಿ" ಎಂದೂ. ಆದರಲ್ಲೂ ಗುಲ ರ್ಗ ಜಿಲ್ಲೆಯಲ್ಲಿ ಈ ರೀತಿ ಆಯಿತಲ್ಲವೇ ಎಂದು ಯೋಚನೆ ಮಾಡಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಬಸವರಾಜ ಕಟ್ಟೀಮನಿಯವರು ಕಳೆದ ೨೫ವರ್ಷಗಳಲ್ಲಿ ಉದುರಿ ಉರಿದು ಹೋದ ಸರ್ಕಾರಗಳು ಇವಕ್ಕೆ ಹೊಣೆಯಲ್ಲವೇ ಎಂದು ಪ್ರಸ್ತಾಪ ಮಾಡಿದಾಗ ನಾನು ಅದರ ಬಗ್ಗೆ ಪ್ರಸ್ತಾಪ ಮಾಡಿ ನನ್ನ ಅಭಿಪ್ರಾಯವನ್ನು ಹೇಳಬೇಕಾಯಿತು

ಶ್ರೀ ಎಚ್. ಡಿ. ದೇವೇಗೌಡ.—ಅವರು ಸಾಹಿತಿ ಎಂದು ಕಾಣುತ್ತದೆ. ಅಲ್ಲದೆ ಇತ್ತೀಚಿಗೆ ಅವರ ಟರ್ಮ್ ಮುಗಿಯುತ್ತಾ ಬಂದಿದೆ ಎಂದೂ ಕಾಣುತ್ತದೆ. ಅದಕ್ಕಾಗಿ ಅವರು ಈ ರೀತಿ ಹೇಳುತ್ತಾರೆಂದು ಕಾಣುತ್ತಿದೆ. ಆದರೆ ರಾಜಾಸ್ಥಾನದಲ್ಲಿ, ಮಹಾರಾಷ್ಟ್ರದಲ್ಲಿ, ಆಂಧ್ರ ಮುಂತಾದ ರಾಜ್ಯಗಳಲ್ಲಿಯೂ ಈ ಕ್ಷಾಮ ಬರುವುದಕ್ಕೆ ಮುಂಚೆ ಆಡಳಿತದಲ್ಲಿ ಕಾಂಗ್ರೆಸ್ (ಒ) ಪಕ್ಷ ಇತ್ತೆ ಎಂದೂ ನಾನು ಕೇಳುತ್ತೇನೆ. ಇದು ರಾಷ್ಟ್ರದಲ್ಲಿ ಬೆಳೆಯುವುದಕ್ಕೆ ನಮ್ಮ ರಾಜ್ಯ ಪುಟ್ಟದ ಪಾಪದ ಫಲವೇ, ಅಥವಾ ರಾಷ್ಟ್ರ ಮಟ್ಟದ ನಾಯಕತ್ವದ ಕಾರಣವೇ ಎಂಬುದನ್ನು ನಾನು ಪ್ರಶ್ನೆ ಮಾಡುತ್ತೇನೆ''

ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೇಲ್ಮನೆ ಸದಸ್ಯರ ವಿಚಾರವಾಗಿ ಮಾತನಾಡುವಾಗ, ಏನಾದರೂ ಒಂದು ಮೋಟಿವ್ ಇಟ್ಟುಕೊಂಡು ಇನ್ನು ಮುಂದೆ ಈ ಸಭೆಯಲ್ಲಿ ಮಾತನಾಡಬಾರದೆಂದು ನಾನು ತಮಗೆ ವಿನಂತಿ ಮಾಡಿಕೊಳ್ಳುತ್ತೇನೆ.

Apponitments at the P.S.C.

ಶ್ರೀ ಸಿ. ಬೈರೇಗೌಡ—ನಾನು ನಿನ್ನೆ ತಮ್ಮ ಅಪ್ಪಣೆ ಪಡೆದು ೩೧ನೇ ರೂಲ್ ಪ್ರಕಾರ ನಮ್ಮ ರಾಜ್ಯದಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಆಗುತ್ತಾ ಇರತಕ್ಕ ಕೇವಲ ಒಂದು ಭಾಗದ ವಿದ್ಯಾರ್ಥಿಗಳಿಗೆ ಮತ್ತು ಅಭ್ಯರ್ಥಿಗಳಿಗೆ ಇರುವ ತೊಂದರೆಯ ಬಗ್ಗೆ ನಾನು ನಿವೇದಿಸಿಕೊಂಡಾಗ ಮಾನ್ಯ ಕಂದಾಯ ಸಚಿವರು ಮಾನ್ಯ ಮುಖ್ಯ ಮಂತ್ರಿಗಳ ಕಛೇರಿಗೆ ಹೋಗಿದ್ದರು. ನಾಳೆ ಆ ವಿಚಾರವಾಗಿ ಉತ್ತರ ತರಿಸಿ ಹೇಳುತ್ತೇನೆಂದು ಹೇಳಿದರು. ಇವತ್ತು ಕಂದಾಯ ಸಚಿವರು ಇಲ್ಲಿಲ್ಲ. ಅದರ ಪರಿಸ್ಥಿತಿ ಏನಾಯಿತೋ ಗೊತ್ತಿಲ್ಲ. ಇವತ್ತು ಮೈಸೂರು ರಾಜ್ಯದ ಪಬ್ಲಿಕ್ ಸರ್ವಿಸ್ ಕಮಿಷನ್ನಿನ್ನಲ್ಲಿ ಡೈರೆಕ್ಟ್ ರೆಕ್ರೂಟ್‌ಮೆಂಟ್ ರೂಲ್ ೫ಎ (೧) ಪ್ರಕಾರ ಕ್ವಾಲಿಫೈಡ್ ಆಗಿರುವವರಿಗೆ ಅಲ್ಲಿ ಎಷ್ಟು ಎಗ್ಜಾಮಿನೇಷನ್ಸ್, ಆದರೂ ಅವರೇಜ್ಸ್ ಅಂಕಗಳನ್ನು ಹಾಕುವ ಪದ್ಧತಿ ಆ ಕಾನೂನಿನಲ್ಲಿ ಇದೆ. ಇವತ್ತಿನದಿವಸ ಪಬ್ಲಿಕ್ ಕಮಿಷನ್ನಿನಲ್ಲಿ ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಮೂರು ವರ್ಷ ಪರೀಕ್ಷೆಗಳ ಅಂಕಗಳನ್ನು ಅವರೇಜ್ ತೆಗೆದುಕೊಂಡು, ಕರ್ನಾಟಕ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಎರಡೂ ವರ್ಷ ಪರೀಕ್ಷೆಗಳ ಅಂಕಗಳ ಅವರೇಜನ್ನು ತೆಗೆದುಕೊಂಡು ಸೆಲೆಕ್ಷನ್‌ಗಳು ನಡೆಯುತ್ತಿವೆ. ಇದರಿಂದ ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗುತ್ತಿದೆ.

ಅಧ್ಯಕ್ಷರು.—ತಾವು ಇದನ್ನೆಲ್ಲಾ ಹಿಂದೆಯೇ ಹೇಳಿದ್ದೀರಿ. ಹಿಂದೆ ಹೇಳಿದ್ದೆಲ್ಲಾ ರಿಕಾರ್ಡ್ ಆಗಿವೆ.

ಶ್ರೀ ಸಿ. ಬೈರೇಗೌಡ—.ನಾನು ರಿಕಾರ್ಡ್ ಆಗಬೇಕೆಂಬ ದೃಷ್ಟಿಯಿಂದ ಹೇಳುತ್ತಾ ಇಲ್ಲ. ಅಲ್ಲಿ ಆಗುತ್ತಾ ಇರತಕ್ಕ ತೊಂದರೆಗಳನ್ನು ಸರಿಪಡಿಸಬೇಕಷ್ಟೆ.

ಅಧ್ಯಕ್ಷರು.—ಅದು ಮಾನ್ಯ ಮುಖ್ಯಮಂತ್ರಿಗಳಿಗೆ ಹೋಗಿದೆ. ಅವರು ಈಗ ಊರಿನಲ್ಲಿಲ್ಲ ಅವರು ಸಭೆಗೆ ಬರಬೇಕು. ಬಂದಮೇಲೆ ಅದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ಸಿ. ಬೈರೇಗೌಡ.—ನಿನ್ನೆ ಮಾನ್ಯ ಕಂದಾಯ ಸಚಿವರು ಅದರ ಬಗ್ಗೆ ಉತ್ತರವನ್ನು ತರಿಸಿ ಹೇಳುತ್ತೇನೆಂದು ಹೇಳಿದರು.

Objections against the one Man Commission by a exmember of L, A, of Bdier District.